“ಕರೀಲಾ ಪೊಲೀಸರಿಗೆ?...”

“ಬೇಡಾ...” ಅವನು ಭಯದಿಂದ ಕೂಗಿದ.

ಪೊಲೀಸಿನ ಹೆಸರೆತ್ತಿದರೆ ಅವನಿಗೆ ತುಂಬ ಭಯ. ಹಲವಾರು ಸಲ ಪೊಲೀಸರ ಕನಸು ಕಂಡು ಅಳುತ್ತಾ ಅವನು ನಿದ್ರೆಯಲ್ಲಿ ಬೆಚ್ಚಿಬಿದ್ದು ಎಚ್ಚರಗೊಳ್ಳುತ್ತಿದ್ದ.

“ನೀನ್ಯಾಕೆ ಮಗಳೇ ಬಟ್ಟೆ ಬಿಚ್ತಾ ಇಲ್ಲ?...”

“ನಾನು ಮನೆಗೆ ಹೋಗಬೇಕು...”

ಅವಳು ಮತ್ತೆ ಅಳತೊಡಗಿದಳು.

“ಬಿಚ್ಚಿಬಿಡು...” ಅವನು ಅವಳ ಕಿವಿಯಲ್ಲಿ ಹೇಳಿದ: “ನಾವು ಮಕ್ಕಳಲ್ವಾ?...”

“ನನಗೆ... ನಾಚಿಕೆಯಾಗತ್ತೆ...”

ಅದನ್ನು ಕೇಳಿದ ಆತನಿಗೆ ಮತ್ತೆ ಪೂರ್ತಿ ನಗು ತಂದುಕೊಂಡು, ಬಲ್ಬುಗಳನ್ನು ಒಂದೊಂದಾಗಿ ಆರಿಸಿದ. ಈಗ ಅಲ್ಲಿ ಮಂದವಾದ ಬೆಳಕು ಮಾತ್ರ ಇರೋದು. ಆ ಬೆಳಕಿನಲ್ಲಿ ಅವರಿಗೆ ಪರಸ್ಪರ ಮುಖ ಕಾಣಿಸುತ್ತಿರಲಿಲ್ಲ. ಅವಳು ಕತ್ತಲೆಯೆಡೆಗೆ ಸರಿದು ನಿಂತಳು.

“ಅಷ್ಟು ಸಾಕಾಗಲ್ಲ...” ಆತನಿಗೆ ಮತ್ತೆ ನಗು: “ಪೂರ್ತಿ ಬಿಚ್ಚು...”

ಆತ ಕ್ಯಾಮರಾದ ಹಿಂದಕ್ಕೆ ಸರಿದುನಿಂತು ಬಹಳ ಹೊತ್ತು ಏನೇನೋ ಮಾಡಿದ. ಹಲವಾರು ಸಲ ಲೆನ್ಸ್‌ಗಳನ್ನು ಬದಲಾಯಿಸುವ, ಬೆಳಕನ್ನು ಆಫ್ ಮಾಡುವ ಕೆಲಸಗಳನ್ನು ಮಾಡುತ್ತಲೇ ಇದ್ದ. ಆತ ಮಾಡುತ್ತಿರುವುದಾದರೂ ಏನೂಂತ ಆ ಮಕ್ಕಳಿಗೆ ಗೊತ್ತಾಗ್ತಾ ಇರಲಿಲ್ಲ.

“ನಾನು ಮನೆಗೆ ಹೋಗಬೇಕು...” ಎಂದು ಅವಳು ಆಗಾಗ್ಗೆ ಹೇಳುತ್ತಲೇ ಇದ್ದಳು.

ಕ್ಯಾಮರಾ ಮುಂದಿನಿಂದ ಹಲವಾರು ಸಲ ಕ್ಲಿಕ್ ಅನ್ನುವ ಶಬ್ದ ಕೇಳಿಸ್ತಾ ಇತ್ತು. ಸ್ವಲ್ಪ ಹೊತ್ತು ಕಳೆದ ಅನಂತರ, ಆತ ಕ್ಯಾಮರಾದ ಹಿಂದಿನಿಂದ ತಲೆಯೆತ್ತಿದ. ಮಂದವಾದ ಕತ್ತಲೆಯಲ್ಲಿ ಆತನ ನಗು ಹೊಳೆಯುತ್ತಾ ಇತ್ತು.

“ಇನ್ನು ಮಕ್ಕಳಿಬ್ಬರೂ ಮನೆಗೆ ಹೋಗಿ...”

ಆತ ಒಂದೊಂದಾಗಿ ಲೈಟುಗಳನ್ನು ಆನ್ ಮಾಡಿದ.

“ಒಂದು ಮುಖ್ಯವಾದ ವಿಚಾರ.... ನೋಡಿ ಈ ವಿಚಾರವನ್ನು ನಿಮ್ಮ ಅಪ್ಪನಿಗಾಗಲೀ ಅಮ್ಮನಿಗಾಗಲೀ ಹೇಳಬಾರದು... ಹೇಳಿದರೆ... ಮತ್ತೆ...”

ಗಡಿಬಿಡಿಯಲ್ಲಿ, ಬಟ್ಟೆಯನ್ನು ಹಾಕಿಕೊಂಡು ಪುಸ್ತಕದ ಚೀಲದೊಂದಿಗೆ, ಗೂಡು ತೆರೆದುಬಿಟ್ಟ ಗುಬ್ಬಚ್ಚಿಗಳಂತೆ ಅವರು ಹೊರಗಡೆ ಬಂದರು. ಸೋರಿಹೋದ ಉತ್ಸಾಹದಿಂದ ತಲೆತಗ್ಗಿಸಿ ಏನೂ ಮಾತನಾಡದೆ ರಸ್ತೆಯ ಮಗ್ಗಲಿನಿಂದ ಅವರು ಮನೆಯ ದಾರಿ ಹಿಡಿದರು. ರಸ್ತೆಯಲ್ಲಿ ಶಾಲೆಯ ಮಕ್ಕಳ್ಯಾರೂ ಕಾಣಿಸ್ತಾ ಇರಲಿಲ್ಲ. ಬಹುಶಃ ಎಲ್ಲರೂ ಮನೆ ಸೇರಿರಬೇಕು. ದೊಡ್ಡವರು ಮಾತ್ರ ನಡೆಯುತ್ತಿದ್ದ ರಸ್ತೆಯಲ್ಲಿ, ಚಿಕ್ಕವರಾದ ಅವರಿಬ್ಬರು ನಡೆದು ಹೋಗುತ್ತಿದ್ದರು. ಬೇಲಿಯ ಹತ್ತಿರ ಹೊರಗಡೆಗೆ ನೋಡುತ್ತಾ ನಿಂತಿದ್ದ ಅಮ್ಮನನ್ನು ದೂರದಿಂದಲೇ ಮಕ್ಕಳಿಗೆ ಕಾಣಲು ಸಾಧ್ಯವಾಯಿತು.

“ಎಲ್ಲಿ ಅಲಿಯೋಕೆ ಹೋಗಿದ್ರಿ?...” ಅಮ್ಮ ಕೇಳಿದರು: “ಶಾಲೆ ಬಿಟ್ಟ ಮೇಲೆ ಸೀದಾ ಮನೆ ಬಂದು ತಲುಪಬೇಕು. ಇಲ್ಲದಿದ್ರೆ, ನಿನ್ನ ಕೈಕಾಲು ಮುರಿದು ಹಾಕಿಬಿಡ್ತೀನಿ...”

ಭಾರದ ಪುಸ್ತಕದ ಚೀಲವನ್ನು ಹೊತ್ತು ಅವಳು ಒಳಗಡಗೆ ಹೋಗುವಾಗ, ಹಿಂದಿನಿಂದ ಅಮ್ಮ ಬಂದರು.

“ಯಾಕೆ ಸುಖಾಸುಮ್ಮನೆ ಆ ಅಭಿಲಾಷ್‌ನೊಂದಿಗೆ ತಿರುಗಾಡ್ತಾ ಇರ್ತೀಯಾ?... ನಿನಗೆ ಜೊತೆಗಾರರಾಗಿ ಹುಡುಗಿಯರ್‍ಯಾರೂ ಇಲ್ವಾ?...”